ಮೈಸೂರ ಗಿಜಿತ.

ನಂ. 38 ಸರ್ಕಾರದಿಂದ ಫಾಯಿಷ್ ಆದ್ದು. ಸ್ 1884

ಬೆಂಗಳೂರು, ಶನಿವಾರ, ಸೆಪ್ಟಂಬರ್ ತಾ॥ 20, ಸ್ 1884.

ವಿಷಯ ಸೂಚಿಕೆ.

1ನೇ ಭಾಗ–ಮೈಸೂರು ಮಹಾರಾಜ ರಾಜಾಸಾಹೆಬ್ ಬಹದೂರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

2ನೇ ಭಾಗ–ರೆಸಿಡೆಂಟರು, ಚೀಫ್ ಜಡ್ಜೀಯವರು, ಸರ್ವೆ ವ ಇನಾಂ ಸೂಪರ್ಟಿಂಡೆಂಟರು, ಕಾಂಟ್ರೋಲರವರು, ಪಬ್ಲಿಕ್ ವರ್ಕ್ಸ್ ಆಫೀಸರ್‌ಗಳು, ಮೈಸೂರು ಸ್ಟೇಟ್‌ರೇಯಿಲ್‌ವೆ, ರಿಜಿಸ್ಟ್ರೇರ್ಷ ಇನ್‌ಸ್ಪೆಕ್ಟರ್ ಜನರಲ್ಲವರು, ಅಂಚೇ ಬಕ್ಷೀರು, ಮ್ಯುನಿಸಿಪಲ್ ಬೋರ್ಡು ಪ್ರಸಿಡೆಂಟರು, ಡಿಸ್ಟ್ರಿಕ್ಟು ವ ಸೆಷ್ಷ ಜಡ್ಜೀರು, ಡಿ॥ ಡೆಪ್ಯುಟೆ ಕಮ್ಮಿಷನರುಗಳು, ಸಬಾರ್ಡಿನೇಟ್ ಜಡ್ಜೀರು, ಪೊಲೀಸ್‌ಸೂಪರ್ಟಿಂಡೆಂಟರು, ಫಾರೆಸ್ಟು ಆಫೀಸರ್‌ಗಳು, ಇವರುಗಳಿಂದ ಕೊಡೋಣಾದ ಇಸ್ತಿಹಾರ್‌ಗಳು ವಗೈರೆ; ಕಾಲಸ್ಥಿತಿ ರಿಪೋರ್ಟುಗಳು; ಪೋಸ್ಟಾಫೀಸ್ ನೋಟೀಸ್‌ಗಳು.

3ನೇ ಭಾಗ–ಶ್ರೀಮ್ ಮಹಾರಾಜ ರಾಜಾಸಾಹೇಬ್ ಬಹದೂರವರಿಂದ ಮಂಜೂರ್ಮಾಡಲ್ಪಟ್ಟ ಆಕ್ಟುಗಳು ವ ರೆಗ್ಯುಲೇಷ್ಷಗಳು—ಇಲ್ಲ.

4ನೇ ಭಾಗ–ಸರ್ಕಾರೀ ಕಾಗದ ಪತ್ರಗಳು—ಮೈಸೂರು ಜೀವೆಯ ಲ್ಯಾಂಡ್ ರೆವಿನ್ಯು ರೆಗ್ಯುಲೇಷನಿನ ಮನೂದಾ.

೧ನೇ ಭಾಗ.

ಶ್ರೀಮನ್ಮಹಾರಾಜ ರಾಜಾಸಾಹೇಬರವರ ದಿವಾನರವರಿಂದ ಕೊಡೋಣಾದ ಇಸ್ತಿಹಾರ್‌ನಾಮೆಗಳು.

ಜನರಲ್.

ಇಸ್ತಿಹಾರ್‌ನಾಮೆ.

ತಾರೀಖು 2ನೇ ಸೆಪ್ಟಂಬರ್ 1884.

ನಂ. 133.—ಮೈಸೂರು ಪಹರಿನ ಇದರಡೀ ಕಂಡ ಚಕ್ಕು ಬಂದಿ ವಿವರಣೆಯು, ದಿವಾನರವರಿಂದ ಮಂಜೂರ್ಮಾಡಲ್ಪಟ್ಟು, ಸರ್ವರ ತಿಳುವಳಿಕೆ ಬಗ್ಗೆ ಇದರಿಂದ ಪ್ರಕಟಿಸಲ್ಪಡುತ್ತೆ :–

ಸರಹದ್ದು ಲೈನು, ಮೈಸೂರು–ಶ್ರೀರಂಗಪಟ್ಟಣದ ರಸ್ತೆಯ 86ನೇ ಮೈಲಿಯ 6ನೇ ಫರಲಾಂಗಿನಲ್ಲಿರುವ ಕೇತುವೆಯ ಮಧ್ಯಭಾಗದಿಂದ ಉತ್ತರಕ್ಕೆ 500 ಅಡಿಗಳ ದೂರದ ಮೊದಲು ಪೂರ್ವ ದಿಕ್ಕಿಗಾಗಿ ತೋಟಗಳ ಮಾರ್ಗವಾಗಿ ದಾರಿಯ ಉತ್ತರ ದಿಕ್ಕಿಗೆ ವ್ಯಾಪಿಸಿ, ನೀರು ಹರಿಯುವ ಹಳ್ಳದ ಮಧ್ಯದ ವರಿವಿಗೂ ಸುಮಾರು 300 ಅಡಿಗಳ ತನಕ ಹೋಗಿ, ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಟಣದ ಹಳೇರಸ್ತೆಯನ್ನ ಯರಪು ಕಾಲುದಾರಿಗಳು ಸೇರುವ ಕಡೆ ಸಂಧಿಸುತ್ತದೆ. ಶ್ರೀರಂಗಪಟ್ಟಣದ ಹಳೇ ರಸ್ತೆಯಲ್ಲಿರುವ ಈ ಗುರ್ತು ಆರಂಭಿಸಿ ಸರಹದ್ದು ಲೈನು, ನಿರಬಾತಿ ದಿಕ್ಕಿಗಾಗಿ ನೆಟ್ಟಗೆ ಹೊರಟು "ಗೋಣೀಮರದ" ತೋಪಿನ ಈಶಾನ್ಯ ದಿಕ್ಕಿಗೆ 20 ಅಡಿಗಳ ದೂರದಲ್ಲಿರುವ ದಮನೂರು ಕೆರೆ ರಸ್ತೆಯಲ್ಲಿ ಗುರ್ತು ಮಾಡಿರುವ ಸ್ಥಳದ ವರಿಗೆ ವ್ಯಾಪಿಸುತ್ತದೆ, ತೋಪಿನಿಂದ ನೆಟ್ಟಗೆ ಹೊರಟು ನವಾಬರ ಭಾವಿಯ ಈಶಾನ್ಯ ದಿಕ್ಕಿನ ಕೊನೆಗೆ 20 ಅಡಿಯಲ್ಲಿರುವ ಗುರ್ತಿನ ವರಿಗೆ ಹೋಗುತ್ತದೆ.

688

ಸರಹದ್ದುಲೈನು, ನವಾಬರ ಭಾವಿಯಿಂದ ನೆಟ್ಟಗೆ ಹೊರಟು ಕಾಟವ್ಯನಹಳ್ಳಿಗೆ ಹೋಗುವ ಕೀಳುದಾರಿಯು ಕಾರಂಜೀಕೆರೆ ಕಾಲವೆಯನ್ನು ಬಿಡುವ ವರಿಗೆ ಹೋಗುತ್ತದೆ. ಅನಂತರ ನೆಟ್ಟಗೆ ಕೋಟೆಯ ಪಳೇ ಕಂದಕದ ಕೊನೆ ವರಿವಿಗೂ ಹೋಗಿ ಅಲ್ಲಿಂದ ಪೂರ್ವದಿಕ್ಕಿಗಾಗಿ ಕೋಟೆ ಕಂದಕದ ಸುತ್ತಲೂ ಈಶಾನ್ಯ ದಿಕ್ಕಿನ ಕೊನೆ ವರಿವಿಗೂ ವ್ಯಾಪಿಸುತ್ತದೆ.

ಸದರೀ ಪಳೇಕೋಟೆಯ ಈಶಾನ್ಯ ದಿಕ್ಕಿನ ಕೊನೆ ಮೊದಲುಗೊಂಡು, ಸರಹದ್ದು ಲೈನು, ಕುದ್ದ ದಕ್ಷಿಣಕ್ಕಾಗಿ ಸುಮಾರು 920 ಅಡಿಗಳ ವರಿವಿಗೂ ವ್ಯಾಪಿಸಿ ಅನಂತರ ನೆಟ್ಟಗೆ ಬನ್ನೂರು ರಸ್ತೆಯಲ್ಲಿ ಸದರೀ ರಸ್ತೆಯು ಚಾಮುಂಡೀ ಬೆಟ್ಟದ ರಸ್ತೆಗೆ ಸೇರುವ ಸ್ಥಳದಿಂದ ಪೂರ್ವ ದಿಕ್ಕಿಗೆ 290 ಅಡಿಗಳ ವರಿವಿಗೆ ವ್ಯಾಪಿಸುತ್ತದೆ. ಈ ಅಳತೆಯು ರಸ್ತೆಗಳ ಪಳ ಚರಂಡಿಗಳು ಕೂಡುವ ಸ್ಥಳದಿಂದ ತೆಗೆಯಲ್ಪಟ್ಟಿಯಿದೆ.

ಸರಹದ್ದು ಲೈನು, ಚಾಮುಂಡೀಬೆಟ್ಟದ ರಸ್ತೆಯನ್ನು ಕೇರಿ ಅದರ ಪೂರ್ವ ಭಾಗಕ್ಕಾಗಿ ಉದ್ದಕ್ಕೆ ಹೊರಟು, ಕುಂಬಾರಹಳ್ಳಿ ಗ್ರಾಮವನ್ನು ಸುತ್ತಿಕೊಂಡು ಸದರೀ ರಸ್ತೆಯು ಕಾರಂಜೀಕೆರೆ ರೆಸ್ತೆಗೆ ಕೂಡುವ ಬಳಿ ಬಂದು ಕೇರುತ್ತೆ.

ಅನಂತರ ಸರಹದ್ದು ಲೈನು, ಕಾರಂಜೀಕೆರೆ ರಸ್ತೆಮತ್ತು ಕುದುರೆ ಜಾಜಿನ ಬೋರೆ ರಸ್ತೆ ಇವುಗಳ ದಕ್ಷಿಣಕ್ಕಾಗಿ ಹೊರಟು, ಗೊಬ್ಬಿಕೆರೆ ತಲಾವಿನ ಯೇರಿ ಮೇಲುಭಾಗಕ್ಕಾಗಿ ಚಾಮುಂಡೀ ಬೆಟ್ಟದ ರಸ್ತೆ ಯಬಳಿ ಕಾಲ್ವೆ ದಾಟುವ ಸ್ಥಳದ ವರಿಗೆ ವ್ಯಾಪಿಸುತ್ತೆ; ಅನಂತರ ರಸ್ತೇ ಮಾರ್ಗವಾಗಿ ಗಾಸಪ್ಪ ತೊಗಚಿ ಮತವನ್ನು ಕೇರಿಸಿಕೊಂಡು ದೊಡ್ಡಕೆರೆ ತಲಾವಿನ ಹೆಚ್ಚಿಗೆ ನೀರು ಹರಿದು ಹೋಗುವ ಕಾಲ್ವೆಯ ದಕ್ಷಿಣಕ್ಕೆ 235 ಅಡಿಗಳ ದೂರದಲ್ಲಿ ಮೈಸೂರು-ನಂಜನಗೂಡು ರಸ್ತೆಯನ್ನು ಸಂಧಿಸುತ್ತದೆ. ಈ ಗುರ್ತು 89ನೇ ಮೈಲಿಯ 8ನೇ ಫರ್‌ಲಾಂಗಿನಲ್ಲಿರುತ್ತೆ.

ಸರಹದ್ದು ಲೈನು, ಅನಂತರ ತೋಟಗಳ ಮಾರ್ಗವಾಗಿ ಸೊಟ್ಟ ಸೊಟ್ಟಾದ ದಾರಿಯನ್ನು ಅನುಸರಿಸಿ ಹೋಗುತ್ತದೆ. ಸದರೀದಾರಿ ಯಾವತ್ತೂ ನಕ್ಷೆಯಲ್ಲಿ ಕಾಣಿಸಿ ಯಿರುವದಿಲ್ಲ, ಮತ್ತು ಸರಹದ್ದು ಲೈನು, ಹಾಗೆಯೇ ಹೊರಟು 89ನೇ ಮೈಲಿಯ 7ನೇ ಫರ್‌ಲಾಂಗು ಕಲ್ಲಿನಿಂದ 160 ಅಡಿಗಳ ದೂರದಲ್ಲಿ ಪಳೇ ಅಗ್ರಹಾರದ ರಸ್ತೆಯನ್ನು ಸಂಧಿಸುತ್ತದೆ.

ಸರಹದ್ದು ಲೈನು, ಅನಂತರ ನೆಟ್ಟಗೆ ದೊಡ್ಡಕೆರೆ ಕಾಲ್ವೆ ಕೊನೆವರಿಗೂ ಹೋಗಿ, ನೀರು ಕಾಲ್ವೆಯ ಪಶ್ಚಿಮ ಭಾಗಕ್ಕೂ, ಕನ್ನೇಗೌಡನ ಕೊಪ್ಪಲು ಗ್ರಾಮದ ಸುತ್ತಲೂ ಯಿರುವ ಕೀಳುದಾರಿಯ ದಕ್ಷಿಣದಿಕ್ಕಿಗೂ, ಮತ್ತು ಕೀಳುದಾರಿಯು ನೀರು ಸರಬರಾಯಿ ಆಗುವ ಕಾಲ್ವೆಯನ್ನು ಸಂಧಿಸುವ ಸ್ಥಳದ ಪಶ್ಚಿಮ ಭಾಗಕ್ಕೂ ಉದ್ದಕ್ಕೆ ಹೊರಟು, ಕೊರಕಲು ರಸ್ತೆಯ ಮೇಲ್ಭಾಗದಲ್ಲಿ ಸದರೀ ದೊಡ್ಡ ಕೆರೆ ಕಾಲ್ವೆಯ ಕೆಳ ಕಟ್ಟೆಯನ್ನು ಅನುಸರಿಸುತ್ತದೆ, ಅನಂತರ ಕಾಲ್ವೆ ಭೂಮಿಯು ಸರಹದ್ದನುಸರಿಸಿ ಸ್ವಲ್ಪ ದೂರದವರಿವಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಡಿಸ್ಟಿಲೇರಿ ಯಾನೆ ಭಟ್ಟಿಮನೆಯನ್ನ ಪೂರ್ವಭಾಗಕ್ಕೆ ಬಿಟ್ಟು ಕೂಕರಹಳ್ಳಿ ಕೆರೆಯ ಹಿಂಭಾಗದ ರಸ್ತೆಗೆ ಹೋಗಿ ಸೇರುತ್ತದೆ.

ಸರಹದ್ದು ಲೈನು, ಅನಂತರ ಕೂಕರಹಳ್ಳಿ ಕಾಲ್ವೆಯ ಪಶ್ಚಿಮಭಾಗಕ್ಕೆ 60 ಅಡಿಗಳವರಿಗೂ ನೆಟ್ಟಗೆ ಹೋಗುತ್ತದೆ, ಅನಂತರ ಉತ್ತರಕ್ಕೆ ತಿರುಗಿ ಪಡುವಾರಹಳ್ಳಿ ಬಿಳಿಯಣ ಹಳ್ಳರಸ್ತೆ ಮತ್ತು ಹೊಸರಸ್ತೆ ಇವೆರಡೂ ಕೇರುವ ಸ್ಥಳದ ಪೂರ್ವಭಾಗಕ್ಕೆ 245 ಅಡಿಗಳ ವರಿಗೂ ಹೋಗುತ್ತದೆ, ಅನಂತರ ಪಡುವಾರಹಳ್ಳಿ ಸುತ್ತಿಕೊಂಡು ಸದರೀ ಗ್ರಾಮದ ಪಶ್ಚಿಮ ಭಾಗಕ್ಕಾಗಿ ಉದ್ದಕ್ಕೆ ಜೀವಣರಾಯರ ಕೆರೆ ಕಾಲ್ವೆವರಿಗೂ ಹೋಗಿ ಧನ್ನೀಕಟ್ಟೆ ಕಾಲ್ವೆಯ ಉತ್ತರ ಭಾಗದ ಕಟ್ಟೆಯ ಅನುಸರಿಸಿ ಹಳ್ಳೀರಸ್ತೆಯ ಪೂರ್ವ ಭಾಗಕ್ಕಾಗಿ ಹುಂಡೀಹಳ್ಳದ ವರಿಗೂ ವಿಸ್ತರಿಸುತ್ತದೆ; ಅಲ್ಲಿಂದ ಹುಂಡೀಹಳ್ಳ ಅನುಸರಿಸಿ ರೈಲ್ ಕೇಡುವೆ ಮಾರ್ಗವಾಗಿ ಪೂರ್ಣಯ್ಯನವರ ಕಾಲ್ವೆಗೆ ಪಶ್ಚಿಮ ಭಾಗಕ್ಕಾಗಿ ಬೆಳಗುಳದ ರಸ್ತೆಯಲ್ಲಿರುವ ಜೋಡೀ ತೆಂಗಿನ ಮರದ ಕೇತುವೆವರೆಗೂ ವ್ಯಾಪಿಸುತ್ತದೆ; ಅಲ್ಲಿಂದ ರಸ್ತೆಯ ಉತ್ತರದಿಕ್ಕಿಗಾಗಿ ಕೊನೆವರಿಗೂ ಹೋಗಿ ಅನಂತರ ನೆಟ್ಟಗೆ ಹೊರಟು ಶ್ರೀರಂಗಪಟ್ಟಣದ ರಸ್ತೆಯಲ್ಲಿ ಸರಹದ್ದು ಲೈನ್ ಆರಂಭವಾಗಿದ ಸ್ಥಳಕ್ಕೆ ಬಂದು ಕೇರುತ್ತದೆ.

ತಾರೀಖು 11ನೇ ಸೆಪ್ಟಂಬರ್ 1884.

ನಂ. 136.—ದಸರಾ ಹಬ್ಬಕ್ಕಾಗಿ ಮೈಸೂರು ಕೀಸೆಯ ಯಲ್ಲ ಪಬ್ಲಿಕ್ ಆಫೀಸ್‌ಗಳೂ, ನವರಾತ್ರಿಯ 6ನೇ ದಿನವಾದ ಸೆಪ್ಟಂಬರ್ 25ನೇ ತಾರೀಖು ಮೊದಲು ಮುಂದಿನ ಅಕ್ಟೋಬರ್ 2ನೇ ನುರ್ಕುಂ ವರಿಗೆ ಬರಖಾಸ್ತು ಮಾಡಲ್ಪಡತಕ್ಕವು.

ಬಮೋಜೀಬ' ಹುಕ್ಕುಂ,

ಆರ್. ವಿಜಯಾಂದ್ರರಾವ್,
ಸೆಕ್ರಟೇರಿ.